ಓ ಎಸ್ ನಂಃ 130/2014
ಡಿಡಬ್ಲ್ಯೂ:01

**ದಿನಾಂಕಃ 12.01.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು**

**ಪಾಟೀ ಸವಾಲುಃ ಶ್ರೀ ಡಿ.ಜೆ.ಆರ್., ವಾದಿ ಪರ ವಕೀಲರಿಂದ**

ನಾನು ಎಸ್ ಎಸ್ ಎಲ್ ಸಿ ವರೆಗೆ ವ್ಯಾಸಂಗ ಮಾಡಿರುತ್ತೇನೆ. ಸರ್ವೆ ನಂಬರ್ 37ರ ಜಮೀನಿಗೆ ಸಂಬಂಸಿದಿದತೆ ವ್ಯಾಜ್ಯ ನಡೆಯುತ್ತಿದೆ ಎಂದರೆ ಸರಿ. 2014 ರಲ್ಲಿ ದಾವಾ ಸ್ವತ್ತು 1 ನೇ ಪ್ರತಿವಾದಿಯ ಹೆಸರಿನಲ್ಲಿ ಇತ್ತು. ದಾವೆಯಲ್ಲಿ ಸಲ್ಲಿಸಿರುವ ದಾಖಲೆಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ. 2014 ರ ಸಾಲಿನ ದಾವಾ ಸ್ವತ್ತಿಗೆ ಸಂಬಂಧಿಸಿದ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. 2014 ರಲ್ಲಿ 1 ನೇ ಪ್ರತಿವಾದಿಯ ಹೆಸರಿನಲ್ಲಿದ್ದ ದಾವಾ ಸ್ವತ್ತಿಗೆ ಸಂಬಂಧಿಸಿದ ಪಹಣಿ ಪತ್ರಿಕೆಯನ್ನು ನ್ಯಾಯಾಲಯಕ್ಕೆ ತೋಂದರೆ ಇದೆಯೇ ಎಂದರೆ ಆ ಸಮಯದಲ್ಲಿ 1 ನೇ ಪ್ರತಿವಾದಿಯ ಹೆಸರಿನಲ್ಲಿ ಪಹಣಿ ಪತ್ರಿಕೆ ಇರಲಿಲ್ಲ ಎಂದು ನುಡಿಯುತ್ತಾರೆ. ನಿಪಿ.8 ರ ಪ್ರಕಾರ ದಾವಾ ಸ್ವತ್ತಿನ ಪಹಣಿ ಪತ್ರಿಕೆಯು 1(ಎ) ವಾದಿಯ ಹೆಸರಿನಲ್ಲಿ ಇರುತ್ತದೆ ಎಂದರೆ ಸಾಕ್ಷಿಯು ಮೋಸದಿಂದ ಮಾಡಿಸಿಕೊಳ್ಳಲಾಗಿರುತ್ತದೆ ಎಂದು ನುಡಿಯುತ್ತಾರೆ. ವಾದಿಯರು ಮೋಸದಿಂದ ಪಹಣಿ ಪತ್ರಿಕೆಯಲ್ಲಿ ಹೆಸರನ್ನು ನಮೂದಿಸಿಕೊಂಡಿರುತ್ತಾರೆ ಎಂಬುದನ್ನು ನಾನು ಯಾವುದಾದರೂ ನ್ಯಾಯಾಲಯದಲ್ಲಿ ಪ್ರಶ್ನಿಸಲಾಗಿದೆಯೇ ಎಂದರೆ ಸಾಕ್ಷಿಯು ಈ ದಾವೆ ಸಲ್ಲಿಸಿದ ನತಂರ ಅದರ ಬಗ್ಗೆ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ದಾವಾಗೆ ಹಾಜರಾದ ನಂತರ ಈ ನ್ಯಾಯಾಲಯವನ್ನು ಹೊರತು ಪಡಿಸಿ ಬೇರೆ ಯಾವುದೇ ನ್ಯಾಯಾಲಯದಲ್ಲಿ ಸದರಿ ಪಹಣಿ ಪತ್ರಿಕೆಯನ್ನು ಪ್ರಶ್ನಿಸಿರುವುದಿಲ್ಲ.

ಕೌಂಟರ್ ಕ್ಲೈಮ್ ಷೆಡ್ಯೂಲ್ ಸ್ವತ್ತಿನ ಸಾಗುವಳಿ ಚೀಟಿಯಲ್ಲಿ ನೀಡಿರುವ ಚಕ್ಕುಬಂದಿಯನ್ನು ನಮೂದಿಸಿರುತ್ತೇವೆ ಎಂದರೆ ಸರಿ. ಕೌಂಟರ್ ಕ್ಲೈಮ್ ಷೆಡ್ಯುಲ್ ಸ್ವತ್ತಿಗೆ 2014 ರ ಸಾಲಿನಲ್ಲಿ ಚಕ್ಕುಬಂದಿ ಪೂರ್ವಃ ತಿಪ್ಪೇಸ್ವಾಮಿ ರವರ ಜಮೀನು, ಪಶ್ಚಿಮಃ ನಾಯಕನಹಟ್ಟಿ ಗಡಿ, ಉತ್ತರಃ ಸರ್ವೆ ನಂಬರ್ 37 ರ ಉಳಿಕೆ ಜಮೀನು , ದಕ್ಷಿಣಃ ನಾಯಕನಹಟ್ಟಿ ಗಡಿ ಇರುತ್ತದೆ, ಕೌಂಟರ್ ಕ್ಲೈಮ್ ಷೆಡ್ಯೂಲ್ ಸ್ವತ್ತಿನ ಉತ್ತರ ದಿಕ್ಕಿನಲ್ಲಿರುವ ಸರ್ವೆ ನಂಬರ್ 37 ರ ಉಳಿಕೆ ಜವೀನನ್ನು ನಾವೇ ಸಾಗಮಳಿ ಮಾಡುತ್ತಿದ್ದೇವೆ . ಸರ್ವೆ ನಂಬರ್ 37 ನೇ ಜಮೀನಿನ ಒಟ್ಟು ವಿಸ್ತೀರ್ಣ 109 ಎರೆ ಇರುತ್ತದೆ. ಕೌಂಟರ್ ಕ್ಲೈಮ್ ಷೆಡ್ಯೂಲ್ ಸ್ವತ್ತಿನ ಪೂರ್ವಕ್ಕೆ ಇರುವ ತಿಪ್ಪೇಸ್ವಾಮಿ ರವರು ಹಾಲಿ ಜೀವಂತ ಇರುವ ಬಗ್ಗೆ ನನಗೆ ಗೊತ್ತಿಲ್ಲ. ಕೌಂಟರ್ ಕ್ಲೈಮ್ ಷೆಡ್ಯೂಲ್ ಸ್ವತ್ತಿನ ಆಜುಬಾಜು

ಜಮೀನುದಾರರೊಂದಿಗೆ ವಿಶ್ವಾಸದಿಂದ ಇರುತ್ತೇನೆ. ಕಳೆದ ವರ್ಷ ಕೌಂಟರ್ ಕ್ಲೈಮ್ ಷೆಡ್ಯೂಲ್ ಸ್ವತ್ತಿನಲ್ಲಿ ಶೇಂಗಾ ಬೆಳೆಯನ್ನು ಬೆಳೆದಿರುತ್ತೇನೆ. ಕಳೆದ ವರ್ಷ ನಮ್ಮ ಜಮೀನಿನ ಪೂರ್ ದಿಕ್ಕಿನ ಜಮೀನಿನಲ್ಲಿ ಶೇಂಗಾ ಬೆಳೆಯನ್ನು ಬೆಳೆದಿದ್ದರು. ಯಾರು ಬೆಳೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಕೌಂಟರ್ ಕ್ಲೈಮ್ ಷೆಡ್ಯೂಲ್ ಸ್ವತ್ತಿನ ಉತ್ತರ ದಿಕ್ಕಿನಲ್ಲಿ ಸುಮಾರು ಅರ್ಧ ಎಕರೆ ಜಮೀನನ್ನು ಉಳುಮೆ ಮಾಡುತ್ತಿದ್ದೇವೆ. ನನ್ನ ಪ್ರಕಾರ ಕೌಂಟರ್ ಕ್ಲೈಮ್ ಷೆಡ್ಯೂಲ್ ಸ್ವತ್ತಿನಲ್ಲಿ ಒಟ್ಟಾರೆ 4 1/2 ಎಕರೆ ಜಮೀನನ್ನು ಉಳುಮೆ ಮಾಡುತ್ತಿದ್ದೇವೆ. 1960-61 ನೇ ಸಾಲಿನಿಂದ 4 1/2 ಎಕರೆ ಜಮೀನನ್ನು ನಾವೇ ಉಳುಮೆ ಮಾಡುತ್ತಿದ್ದೇವೆ. ಸದರಿ ವಿಚಾರವನ್ನು ಪ್ರತಿವಾದ ಪತ್ರದಲ್ಲಿ ತಿಳಿಸಿರುವುದಿಲ್ಲ.

ನಮ್ಮ ಜಮೀನಿನ ಉತ್ತರಕ್ಕೆ ಲೊಕೇಶ ರವರ ಜಮೀನು ಇರುತ್ತದೆ. ಹಳೇ ಸರ್ವೆ ನಂಬರ್ 20 ರಲ್ಲಿ 2 ನೇ ಪ್ರತಿವಾದಿಯ ಹೆಸರಿಗೆ ಜಮೀನನ್ನು ಮಂಜೂರು ಮಾಡಲಾಗಿತ್ತು ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯ ಹೆಸರಿನಲ್ಲಿ ಸಾಗುವಳಿ ಚೀಟಿ ನೀಡಿದ್ದು, ಪಹಣಿ ಪತ್ರಿಕೆ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ಬಾಲರಾಜ್ ತಂದೆ ಮಾದಯ್ಯ, ಎನ್. ಮಹದೇವಪುರ ಗ್ರಾಮ ಎಂದರೆ ನನ್ನ ಅಣ್ಣ ಎಂದರೆ ಸರಿ. ದಿನಾಂಕ 04.05.2004 ರಲ್ಲಿ 2 ನೇ ಪ್ರತಿವಾದಿಯ ಹೆಸರಿನಲ್ಲಿ ಸರ್ವೆ ನಂಬರ್ 20 ರ ಬ್ಲಾಕ್ 1 ರಲ್ಲಿ 3 ಎಕರೆ 10 ಗುಂಟೆ ಜಮೀನನ್ನು ಮಂಜೂರು ಮಾಡಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾವು ಮತ್ತು ನಮ್ಮ ಸಹೋದರರು ಬೇರೆ ಬೇರೆಯಾಗಿ ವಾಸವಾಗಿರುತ್ತೇವೆ. ನಾವು ಬೇರೆಯಾಗಿ ಸುಮಾರು 15 ವರ್ಷಗಳಾಗಿರುತ್ತವೆ. ಪ್ರತಿವದಿಯರು ಎಲ್ಲರೂ ಸೇರಿ ಒಟ್ಟಾಗಿ ತಕರಾರನ್ನು ಸಲ್ಲಿಸಿರುತ್ತೇವೆ. ನಾನು 2 ನೇ ಪ್ರತಿವಾದಿಯ ಪರವಾಗಿಯೂ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದು ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.9 ರಲ್ಲಿ 2 ನೇ ಪ್ರತಿವಾದಿಯ ಹೆಸರು ನಮೂದು ಆಗಿರುತ್ತದೆ ಎಂದರೆ ಸರಿ. 1 ನೇ ಪ್ರತಿವಾದ ಮತ್ತು 2 ನೇ ಪ್ರತಿವಾದಿಯರಿಗೆ ಸರ್ವೆ ನಂಬರ್ 20 ರ 1 ನೇ ಬ್ಲಾಕ್ ನಲ್ಲಿ ಜಮೀನನ್ನು ಮಂಜೂರು ಮಾಡಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. 1 ಮತ್ತು 2 ನೇ ಪ್ರತಿವಾದಿಯರ ಜಮೀನಿನ ನಡುವೆ ಇರುವ ಅಂತರ ಬಗ್ಗೆ ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿಗೆ ಸೇರಿದ ಜಮೀನನ್ನು ನಾನು ನೋಡಿರುವುದಿಲ್ಲ. 2 ನೇ ಪ್ರತಿವಾದಿಯ ಹೆಸರಿನಲ್ಲಿ 3 ಎಕರೆ 10 ಗುಂಟೆ ಜಮೀನು ಇರುವ ಬಗ್ಗೆ ನನಗೆ ಗೊತ್ತಿಲ್ಲ.

**ಓ ಎಸ್ ನಂಃ 130/2014**
**ಡಿಡಬ್ಲ್ಯೂ:01**

ನಾನು ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಸಲ್ಲಿಸುವಾಗ ವಾದಿಯರು ಈ ದಾವೆಯಲ್ಲಿ ಹಾಜರು ಪಡಿಸಿರುವ ದಾಖಲೆಯ ಬಗ್ಗೆ ಮಾಹಿತಿ ಇಲ್ಲ.

**( ವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.